ಈ ಸಾಕ್ಷಿಯನ್ನು ದಿನಾಂಕ 18.11.2017ರಂದು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತುಃ

ಪಾಟೀ-ಸವಾಲು 3ರಿಂದ 5ನೇ ಎದುರುದಾರರ ಪರ ಶ್ರೀ ಬಿ.ಎಂ.ಜಿ. ವಕೀಲರಿಂದಃ

3. ಅಸಲು ದಾವಾ ಸಂಖ್ಯೆ 1613/2005ರಲ್ಲಿ ಆದ ತೀರ್ಪಿನ ಬಗ್ಗೆ ನನಗೆ ಗೊತ್ತಿದೆ ಎಂದರೆ ನಿಜ. ಸದರಿ ದಾವೆಯಲ್ಲಿ ನಾನು ಸಾಕ್ಷಿ ನುಡಿದಿರುತ್ತೇನೆ ಎಂದರೆ ನಿಜವಲ್ಲ. ನನ್ನ ತಂದೆ ಹಾಗೂ ನನ್ನ ದೊಡ್ಡಪ್ಪನವರು ಒಟ್ಟು 4 ಜನ ಸದರಿ ಕೇಸನ್ನು ನಡೆಸುತ್ತಿದ್ದರು. ಎಸ್.ಜಿ. ರಮೇಶ್ ಎಂದರೆ ನಾನೇ ಇರುತ್ತೇನೆ. ನಾನು ಸದರಿ ಕೇಸಿನಲ್ಲಿ ವಾಸಾ-1 ಎಂದು ವಿಚಾರಣೆಗೆ ಒಳಪಟ್ಟಿರುತ್ತೇನೆ ಎಂದರೆ ನಿಜ. ನಾನು ಸದರಿ ದಾವೆಯಲ್ಲಿ ವಾದಿಯರ ಪರವಾಗಿ ಪವರ್ ಆಫ್ ಅಟಾರ್ನಿ ಪಡೆದುಕೊಂಡು ಸಾಕ್ಷಿ ನುಡಿದಿರುತ್ತೇನೆ ಎಂದರೆ ನಿಜ. ಈಗ ನೀವು ತೋರಿಸಿದ ಸದರಿ ಪವರ್ ಆಫ್ ಅಟಾರ್ನಿಯ ದೃಢೀಕೃತ ನಕಲನ್ನು ಈಗ ನೋಡಿದ್ದು, ಇದನ್ನು ನಿಶಾನೆ ಆರ್-1 ಎಂದು ಗುರುತಿಸಲಾಯಿತು. ನಾನು ನನ್ನ ಪ್ರಮಾಣ ಪತ್ರದ 8ನೇ ಕಂಡಿಕೆಯಲ್ಲಿ, ನನ್ನ ತಂದೆ ಸದರಿ ದಾವೆಯನ್ನು ನಡೆಸುತ್ತಿದ್ದು, ಅವರಿಗೆ ಸದರಿ ಪ್ರಕರಣದ ಎಲ್ಲಾ ಮಾಹಿತಿ ಇತ್ತು – ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ನಿಜವಲ್ಲ. ನನ್ನ ತಂದೆಗೆ ಯಾವುದೇ ಆರೋಗ್ಯದ ತೊಂದರೆ ಇರಲಿಲ್ಲ ಎಂದರೆ ನಿಜವಲ್ಲ. ನಾನು ಈ ಮೇಲ್ಮನವಿ ಕಾಲಮಿತಿಯಲ್ಲಿ ಬರುತ್ತದೆ ಎಂದು ತೋರಿಸುವ ಸಲುವಾಗಿ, ಸದರಿ ದಾವೆಯನ್ನು ನಾನೇ ನಡೆಸಿದ್ದರೂ, ನನ್ನ ತಂದೆ ನಡೆಸುತ್ತಿದ್ದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ನಿಜವಲ್ಲ. ಆರ್.ಎಫ್.ಎ-ಯನ್ನು 1792/2012ರಲ್ಲಿ ದಾಖಲಿಸಲಾಗಿದೆ. ದಿನಾಂಕ 27.6.2013ರಂದು ಸದರಿ ಮೇಲ್ಮನವಿಯನ್ನು ಹಿಂದಕ್ಕೆ ಪಡೆದಿರುತ್ತೇನೆ ಎಂದರೆ ನಿಜ. ಮೇಲ್ಮನವಿಯನ್ನು ದಿನಾಂಕ 10.7.2014ರಂದು ದಾಖಲಿಸಿರುತ್ತೇನೆ ಎಂದರೆ ನಿಜ. ನಾನು ಮಾನ್ಯ ಉಚ್ಚ ನ್ಯಾಯಾಲಯದ ಆದೇಶ ಆದ ಕೂಡಲೇ ಅದರ ನಕಲನ್ನು ಪಡೆದು ಮೇಲ್ಮನವಿಯನ್ನು ಸಲ್ಲಿಸಲು ನನಗೆ ಯಾವುದೇ ತೊಂದರೆ ಇರಲಿಲ್ಲ. ದಿನಾಂಕ 27.6.2013ರಲ್ಲಿ ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ಆದೇಶ ಆಗಿರುವುದನ್ನು 2-3 ತಿಂಗಳುಗಳಲ್ಲಿ ನಮ್ಮ ವಕೀಲರ ಮೂಲಕ ತಿಳಿದುಕೊಂಡಿರುತ್ತೇನೆ. ಮಾನ್ಯ ಉಚ್ಚ ನ್ಯಾಯಾಲಯದಿಂದ ಕಡತವನ್ನು ನಮ್ಮ ವಕೀಲರು ಯಾವಾಗ ವಾಪಸ್ಸು ತೆಗೆದುಕೊಂಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ನಮ್ಮ ವಕೀಲರು ಮಾನ್ಯ ಉಚ್ಚ ನ್ಯಾಯಾಲಯದಿಂದ ಕಡತವನ್ನು ವಾಪಸ್ಸು ತೆಗೆದುಕೊಳ್ಳುವಾಗ ನಾನು ಹಾಜರಿದ್ದೆನು. ಹೀಗೆ ಕಡತವನ್ನು ವಾಪಸ್ಸು ತೆಗೆದುಕೊಂಡ ಎಷ್ಟು

ಅವಧಿಯಲ್ಲಿ ಈ ಮೇಲ್ಮನವಿಯನ್ನು ಸಲ್ಲಿಸಿರುತ್ತೇನೆ ಎಂದು ನನಗೆ ಗೊತ್ತಿಲ್ಲ, ಆದರೆ ನನ್ನ ವಕೀಲರಿಗೆ ಗೊತ್ತಿದೆ. ಸದರಿ ಕಡತವನ್ನು ಮಾನ್ಯ ಉಚ್ಚ ನ್ಯಾಯಾಲಯದಿಂದ ವಾಪಸ್ಸು ಪಡೆದುಕೊಂಡ ಎಷ್ಟು ದಿನದಲ್ಲಿ ಈ ಮೇಲ್ಮನವಿಯನ್ನು ಸಲ್ಲಿಸಿರುತ್ತಾರೆ ಎಂದು ನಾನು ನಮ್ಮ ವಕೀಲರ ಹತ್ತಿರ ಕೇಳಿ ತಿಳಿದುಕೊಂಡಿರಲಿಲ್ಲ.

4. ಈ ಮೇಲ್ಮನವಿಯನ್ನು ಸಲ್ಲಿಸಲು 2 ವರ್ಷ, 2 ತಿಂಗಳು, 5 ದಿವಸ ವಿಳಂಬವಾಗಿದೆ ಎಂದರೆ ನನಗೆ ಗೊತ್ತಿಲ್ಲ. ನಾನು ಮಧ್ಯಂತರ ಅರ್ಜಿಯ ಜೊತೆ ಸಲ್ಲಿಸಿರುವ ಪ್ರಮಾಣ ಪತ್ರದಲ್ಲಿ ಮೇಲ್ಮನವಿಯನ್ನು ಸಲ್ಲಿಸಲು 310 ದಿವಸ ವಿಳಂಬವಾಗಿರುತ್ತದೆ ಎಂದು ಸುಳ್ಳು ವರದಿ ಸಲ್ಲಿಸಿರುತ್ತೇನೆ ಎಂದರೆ ನಿಜವಲ್ಲ. 6ನೇ ಎದುರುದಾರರು ನಾಗರಾಜು ಅವರು ತೀರಿಕೊಂಡಿರುತ್ತಾರೆ ಎಂದರೆ ನಿಜ. ಅವರು ಯಾವಾಗ ತೀರಿಕೊಂಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ಈ ಕೇಸನ್ನು ದಾಖಲಿಸುವಾಗ ನಾಗರಾಜು ಅವರು ಬದುಕಿದ್ದರೋ ಅಥವಾ ತೀರಿಕೊಂಡಿದ್ದರೋ ಎಂದು ನನಗೆ ಸರಿಯಾಗಿ ಗೊತ್ತಿಲ್ಲ. ನಾನು ನನ್ನ ಮುಖ್ಯ-ವಿಚಾರಣೆಯಲ್ಲಿ ಹೇಳಿರುವ ಸಂಗತಿಗಳು ಸುಳ್ಳಿನಿಂದ ಕೂಡಿರುತ್ತದೆ ಎಂದರೆ ನಿಜವಲ್ಲ. ನನ್ನ ತಂದೆ ಅನಾರೋಗ್ಯದಿಂದ ಇದ್ದರು ಎಂದು ತೋರಿಸಲು ಯಾವುದೇ ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ ಎಂದರೆ ನಿಜ. ನನ್ನ ತಂದೆ ಆರೋಗ್ಯವಾಗಿದ್ದರೂ ಅನಾರೋಗ್ಯದಿಂದ ಇದ್ದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ನಿಜವಲ್ಲ. ಅದೇ ಕಾರಣದಿಂದ ನಾನು ಯೂವುದೇ ದಾಖಲೆ ಹಾಜರುಪಡಿಸಿರುವುದಿಲ್ಲ ಎಂದರೆ ನಿಜವಲ್ಲ. ನಾನು ಮೇಲ್ಮನವಿಯನ್ನು ದಾಖಲಿಸಲು ಆದ ವಿಳಂಬವನ್ನು ಮನ್ನಿಸುವಂತಹ ಯಾವುದೇ ಸಕಾರಣಗಳನ್ನು ಕಾಣಿಸಿರುವುದಿಲ್ಲ ಎಂದರೆ ನಿಜವಲ್ಲ.

ಮರು-ವಿಚಾರಣೆಃ ಇಲ್ಲ

(ಮೇಲ್ಕಂಡ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ ಎಂದು ಒಪ್ಪಿಕೊಂಡಿರುತ್ತಾರೆ

(ಸಾವಿತ್ರಿ. ವಿ. ಭಟ್)
7ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು.